ವಿಪರೀತವಾದ ಗಜಿಬಿಜಿ ಸದ್ದು ಕೇಳಿಸುತ್ತಿತ್ತು. ಟಾಯ್ಲೆಟ್ ಕೆಲಸಗಳನ್ನು ಮುಗಿಸಿಕೊಂಡು ಹೊರಗೆ ನಡೆದಿದ್ದೆ. ಆಕಾಶ ಶುಭ್ರವಾಗಿತ್ತು, ಇದೇ ಆಕಾಶವೇನಾ ಮೊನ್ನೆ ರಾತ್ರಿ ಜಲಪಾತದಂತೆ ಮಳೆ ಸುರಿಸಿದ್ದು ಎಂದು ಅನುಮಾನ ತರಿಸು ವಂತೆ. ಮನೆಯ ಮುಂದೆ ಸುಮಾರು 300 ಜನ ಸೇರಿದ್ದರು. ನಯ್ಯಾರ್ ಸೇರಿದ್ದ ಜನಕ್ಕೆ ತಾವೇ ಮುಂದೆ ನಿಂತು ಊಟ ಬಡಿಸುತ್ತಿದ್ದರು. ಊಟದ ಜೊತೆಗೆ ಮಕ್ಕಳನ್ನು ಹೊರತುಪಡಿಸಿ ದೊಡ್ಡವರಿಗೆಲ್ಲಾ ತಲಾ ಎರಡು ಸಾವಿರ ರೂಪಾಯಿಯ ನೋಟನ್ನು ಕೂಡಾ ಕೊಡಲಾಗುತ್ತಿತ್ತು. ಮತ್ತೊಂದು ಕಡೆ ಭಗವಾನ್ ಕುಟ್ಟಿ ಶಿಸ್ತಿನಿಂದ ಸಾಲಾಗಿ ಬರುತ್ತಿದ್ದ ಜನರಿಗೆ ಉಲ್ಲನ್ ರಗ್ಗು, ಶಾಲು ಮತ್ತು ಮಫ್ಲರ್‌ಗಳನ್ನು ಹಂಚುತ್ತಿದ್ದ. ಅಚ್ಯುತನ್ ನಂಬಿಯಾರ್ ಚೇರೊಂದರ ಮೇಲೆ ಕುಳಿತು ಚಹಾ ಕುಡಿಯುತ್ತಿದ್ದರು. ನನ್ನನ್ನು ನೋಡಿ ಭಗವಾನ್ ಕುಟ್ಟಿ ಯಾರಿಗೋ ಚಹಾ ಕೊಡಲು ಹೇಳಿದ್ದ. ಚಹಾ ಕುಡಿಯುತ್ತಾ ಕೆ.ಎಮ್. ನಯ್ಯಾರರಿಗೆ ವಿಶ್ ಮಾಡಿದ್ದೆ. ಒಂಬತ್ತು ಗಂಟೆಗೆ ರೆಡಿಯಾಗಲು ಹೇಳಿ ನಯ್ಯಾರ್ ಊಟ ಬಡಿಸುವುದರಲ್ಲಿ ತಲ್ಲೀನ ರಾಗಿದ್ದರು. ರೆವಿನ್ಯೂ ಇಲಾಖೆಯ ಸುಮಾರು ಜನ ಅಧಿಕಾರಿಗಳು ನಯ್ಯಾರ್ ಜೊತೆಗೆ ಊಟ ಬಡಿಸುತ್ತಿದ್ದರು. ಈ ಲೈವ್ ದೃಶ್ಯಗಳು ಎಲ್ಲಾ ಟೀವಿ ಚಾನಲ್‌ಗಳಲ್ಲೂ ಬಿತ್ತರವಾಗುತ್ತಿದ್ದವು. ಜನ ಕಣ್ಣೀರು ಸುರಿಸಿಕೊಂಡು ಕೆ.ಎಮ್. ನಯ್ಯಾರರನ್ನು ಕೊಂಡಾಡುತ್ತಿದ್ದ ದೃಶ್ಯಗಳು ಚಾನಲ್‌ಗಳ ಪರದೆಗಳ ಮೇಲೆ ಕ್ಲೋಸಪ್‌ನಲ್ಲಿ ಬಿತ್ತರವಾಗುತ್ತಿದ್ದವು.

'ನಯ್ಯಾರ್ ದಿ ಲಿವಿಂಗ್ ಮಾರ್ಕ್ಸ್', 'ಕಾರ್ಲ್ ಮಾರ್ಕ್ಸ್ ಮತ್ತೆ ನಯ್ಯಾರ್ ರೂಪದಲ್ಲಿ ಮರುಜನ್ಮ ಪಡೆದಿದ್ದಾರೆ' ಮುಂತಾದ ಅಡಿಬರಹಗಳು ಸುದ್ದಿಗೆ ಮೆರುಗು ನೀಡುತ್ತಿದ್ದವು. ಮನೋಹರ್ ಕುಂಜು ಚಾನೆಲ್‌ಗಳವರ ಅವಶ್ಯಕತೆಗಳ ಮೇಲುಸ್ತುವಾರಿ ನೋಡಿಕೊಳ್ಳುತ್ತಿದ್ದ. 'ಸಾಹೇಬ್ರೆ ಸ್ನಾನ ಮಾಡಿ ರೆಡಿಯಾಗಿ ಬನ್ನಿ. ಇವೊತ್ತು ಅಲಪ್ಪುಜಾ ಮತ್ತು ಚೆಂಗನ್ನೇರಿಗಳಿಗೆ ಭೇಟಿ ಕೊಡಬೇಕಾಗಿದೆ. ಅಲ್ಲೆಲ್ಲಾ ವಿಪರೀತ ಡ್ಯಾಮೇಜ್ ಆಗಿದೆಯಂತೆ. ಲೇಟಾದರೆ ಚಂಗನ್ನೇರಿಯಲ್ಲೇ ಇವೊತ್ತು ರಾತ್ರಿ ಉಳಿಯಬೇಕಾಗುತ್ತದೆ. ಹೇಗಾದರಾಗಲೀ ಒಂದು ಬ್ಯಾಗಿನಲ್ಲಿ ಒಂದಿಷ್ಟು ಬಟ್ಟೆಗಳನ್ನು ಹಾಕಿಕೊಳ್ಳಿ' ಎಂದಿದ್ದ. ಎಂಟು ಗಂಟೆಗೆಲ್ಲಾ ನಾನು ರೆಡಿಯಾಗಿ ಬಂದು ಕೆ.ಎಮ್. ನಯ್ಯಾರರೊಂದಿಗೆ ಊಟ ಮಾಡಿದ್ದೆ. ಸರಿಯಾಗಿ ಒಂಬತ್ತು ಗಂಟೆಗೆ ಒಂಬತ್ತು ಜನರ ಟೀಮ್ ಮೂರು ಕಾರುಗಳಲ್ಲಿ ಮನೆಯನ್ನು ಬಿಟ್ಟಿದ್ದೆವು. ನಾನೂ ಮತ್ತು ಭಗವಾನ್ ಕುಟ್ಟಿ ಕೆ.ಎಮ್. ನಯ್ಯಾರ್ ಕಾರಿನಲ್ಲಿ ಕುಳಿತಿದ್ದೆವು. ಮನೋಹರ್ ಕುಂಜು ಡ್ರೈವರ್ ಸೀಟಿನಲ್ಲಿ ಕುಳಿತಿದ್ದ. ಅಚ್ಯುತನ್ ನಂಬಿಯಾರ್ ತಾನು ಪತ್ತನಂತಿಟ್ಟುಗೆ ಹೋಗಿ ಇಂದು ಅಲ್ಲೇ ಉಳಿದುಕೊಂಡು ನಾಳೆ ರಾತ್ರಿಗೆ ಸಾಧ್ಯವಾದರೆ ಹಾಲ್ಟ್ ಮಾಡಲು ಬರುತ್ತೇನೆಂದು ಹೇಳಿ ತನ್ನ ಕಾರಿನಲ್ಲಿ ಹೊರಟು ಹೋಗಿದ್ದರು.

ಕಾರು ಚಲಿಸಲು ತೊಡಗಿದಾಗ ಕಾಗೆಗಳ ದೊಡ್ಡ ಗುಂಪೊಂದು ಕಾವ್ ಕಾವ್ ಎಂದು ಕೂಗಿಕೊಳ್ಳುತ್ತಾ ಕಾರಿಗೆ ತಾಕಿದಂತೆ ಹಾರಿಹೋಗಿತ್ತು. ಮನೋಹರ್ ಕುಂಜು, 'ಧಣಿ ಇಷ್ಟೊಂದು ಕಾಗೆಗಳು ಕಾರಿಗೆ ಅಡ್ಡ ಬಂದದ್ದು ನೋಡಿದರೆ ಇವೊತ್ತು ಒಳ್ಳೆಯ ಸುದ್ದಿಯೇ ಬರುತ್ತದೆ' ಎಂದಿದ್ದ. ನನಗೆ ತಕ್ಷಣ ಕಾಕಿಗಡ್ಡ ರಾಘವರೆಡ್ಡಿಯ ಊರು ಮತ್ತು ಹೈದರಾಬಾದಿನ ಅವರ ಮನೆ ನೆನಪಾಗಿತ್ತು. 'ನಮ್ಮ ಕಡೆ ಕಾಗೆಯನ್ನು ಅಪಶಕುನ ಎಂದು ನಂಬುತ್ತೇವೆ' ಎಂದಿದ್ದೆ. 'ನಮ್ಮ ಕಡೆ ಅದು ಶುಭ ಸೂಚನೆ ಸಾಹೇಬ್ರೆ. ಬೇಕಾದ್ರೆ ಇವೊತ್ತು ರಾತ್ರಿಯ ಹೊತ್ತಿಗೆ ನೋಡಿ, ಏನಾದರೊಂದು ಶುಭ ಸಮಾಚಾರ ಬಂದೇ ಬರುತ್ತದೆ' ಎಂದ ಭಗವಾನ್ ಕುಟ್ಟಿ, ಶುಭ್ರವಾದ ಬಟ್ಟೆಯ ಬ್ಯಾಗಿನಿಂದ ನಾಲ್ಕು ಬಾಳೆಹಣ್ಣುಗಳನ್ನು ಹೊರತೆಗೆದು ಮೂವರಿಗೂ ಒಂದೊಂದು ಕೊಟ್ಟು ತಾನೊಂದು ತಿಂದಿದ್ದ. ಇಂದು ಕೂಡಾ ಎಲ್ಎಸ್ಡಿ ಟ್ರಿಪ್ ಇದೆಯೆಂದು ತಿಳಿಯುವುದರೊಂದಿಗೆ ಬಹಳವೇ ಖುಷಿಯಾಗಿ ತುಂಬಾ ಅಕ್ಕರೆಯಿಂದ ಹಣ್ಣನ್ನು ತಿಂದಿದ್ದೆ. ಎಲ್ಲರೂ ಹಣ್ಣನ್ನು ತಿಂದಿದ್ದರು. 'ಬಾಳೆಹಣ್ಣಿನಲ್ಲಿ ಎಲ್ಎಸ್ಡಿ ಟ್ರಿಪ್ ಮಾಡಿದಾಗ ಸಿಗುವ ತೃಪ್ತಿ ಮತ್ತು ಖುಷಿ ಬೇರೆ ಯಾವುದರೊಂದಿಗೆ ಎಲ್ಎಸ್ಡಿಯನ್ನು ತೆಗೆದುಕೊಂಡರೂ ಸಿಗುವುದಿಲ್ಲ. ಇದನ್ನು ನಮಗೆ ತೋರಿಸಿಕೊಟ್ಟಿದ್ದು ಅಚ್ಯುತನ್ ನಂಬಿಯಾರ್, ಸುಮಾರು ಹತ್ತು ವರ್ಷಗಳ ಹಿಂದೆ. ಎಲ್ಎಸ್ಡಿಯ ಕೆಟ್ಟ ಪರಿಣಾಮಗಳನ್ನು ಬಾಳೆಹಣ್ಣಿನಲ್ಲಿರುವ ಆಸಿಡ್ ಅಂಶ ತೆಳುಗೊಳಿಸಿ ಆರೋಗ್ಯದ ಮೇಲೆ ಒಂದಿಷ್ಟೂ ಕೆಟ್ಟ ಪರಿಣಾಮ ಉಂಟುಮಾಡದಂತೆ ನೋಡಿಕೊಳ್ಳುತ್ತದೆ. ನಾನು ಅದರ ಖುದ್ದು ಫಲಾನುಭವಿಯಾಗಿ ಹೇಳುತ್ತಿದ್ದೇನೆ, ಈ ಹತ್ತು ವರ್ಷಗಳಿಂದ ನನಗೆ ಒಮ್ಮೆಯೂ ತಲೆನೋವು ಬಂದಿದ್ದಿಲ್ಲ. ಅದಕ್ಕಿಂತ ಮುಖ್ಯವಾಗಿ ಬದುಕಿನಲ್ಲಿ ಎಂಥ ನಷ್ಟಗಳುಂಟಾದರೂ ಅದರ ತೀವ್ರತೆ ನಮ್ಮನ್ನು ತಟ್ಟುವುದೇ ಇಲ್ಲ' ಎಂದು ಕೆ.ಎಮ್. ನಯ್ಯಾರ್ ಅತ್ಯಂತ ಕನ್ವಿನ್ಸಿಂಗಾಗಿ ಹೇಳಿದ್ದರು. ಅಷ್ಟರಲ್ಲಿ ಯಾವುದೋ ಪ್ರವಾಹ ಸಂತ್ರಸ್ತರ ಶಿಬಿರ ಸಿಕ್ಕಿತ್ತು. ಜನ ಕೆ.ಎಮ್. ನಯ್ಯಾರ್ ಮುಂದೆ ತಂದೆ, ತಾಯಿ, ಸಹೋದರ, ಮಕ್ಕಳು, ದನಕರುಗಳು, ಮನೆಗಳನ್ನು ಕಳೆದುಕೊಂಡ ಸಂಗತಿಗಳನ್ನು ರೋದಿಸುತ್ತಾ ಹೇಳಿಕೊಳ್ಳುತ್ತಿದ್ದರು. ನಯ್ಯಾರ್ ಎಲ್ಲರನ್ನೂ ಸಮಾಧಾನಪಡಿಸುತ್ತಾ ಅಧಿಕಾರಿಗಳಿಗೆ ಸೂಕ್ತ ಪರಿಹಾರಗಳನ್ನು ಕೈಗೊಳ್ಳಲು ಸೂಚಿಸುತ್ತಾ, ಪುನರ್ವಸತಿ ಕಲ್ಪಿಸುವ ಬಗ್ಗೆ ಭರವಸೆಗಳನ್ನು ನೀಡುತ್ತಾ ಪ್ರತಿಯೊಬ್ಬರಿಗೂ ತಲಾ ಒಂದೊಂದು ಎರಡು ಸಾವಿರ ರೂಪಾಯಿ ನೋಟನ್ನು ನೀಡುತ್ತಾ ಸಂತೈಸುತ್ತಿದ್ದ ರೀತಿ ಮಾನವೀಯವಾಗಿತ್ತು.

'ನಿಮ್ಮಲ್ಲಿ ಸಂಪತ್ತನ್ನು ದೋಚುವ ಮತ್ತು ಹಾಗೆ ದೋಚಿದ ಸಂಪತ್ತನ್ನು ಅವಶ್ಯಕತೆಯುಳ್ಳವರಿಗೆ ಹಂಚುವ ಗುಣ ಮತ್ತು ಶಕ್ತಿ ಒಂದು ಅತ್ಯಂತ ಸಮತೋಲನದ ಆಯಾಮದಲ್ಲಿ ಅನುಸಂಧಾನವಾಗಿರುವುದು ನಿಜಕ್ಕೂ ಅಚ್ಚರಿಯ ವಿಷಯವೇ ಸರಿ. ಅರ್ಥಶಾಸ್ತ್ರದ ವಿದ್ಯಾರ್ಥಿಯಾಗಿ ಅಲ್ಲಲ್ಲಿ ನಾನು ಕಾರ್ಲ್ ಮಾರ್ಕ್ಸ್‌ನನ್ನು ಸೀರಿಯಸ್ಸಾಗಿಯೇ ಓದಿಕೊಂಡಿದ್ದೇನೆ. ಆತನ ಸಿದ್ಧಾಂತದ ಪರಿಧಿಯಲ್ಲೆಲ್ಲೂ ನಿಮ್ಮಲ್ಲಿನ ಚಹರೆಗಳನ್ನು ಗುರುತಿಸಲಾಗುವುದಿಲ್ಲವೆಂದೇ ನನಗನ್ನಿಸುತ್ತದೆ'. ನನ್ನ ಮಾತುಗಳನ್ನು ಅಷ್ಟು ಸೀರಿಯಸ್ಸಾಗಿ ತೆಗೆದುಕೊಳ್ಳದ ಕೆ.ಎಮ್. ನಯ್ಯಾರ್, 'ನಿಮ್ಮ ಮಾತುಗಳು ಒಂಥರಾ ಹೊಸದಾಗಿ ಕಾಣುತ್ತವೆ ನನಗೆ. ಅದನ್ನು ಅರ್ಥ ಮಾಡಿಕೊಂಡು ಜೀರ್ಣಿಸಿಕೊಳ್ಳುವ ಶಕ್ತಿ ನನಗಿಲ್ಲ' ಎಂದು ನಕ್ಕಿದ್ದರು. ಅವರ ಮಾತನ್ನು ಭಗವಾನ್ ಕುಟ್ಟಿ ಮತ್ತು ಮನೋಹರ್ ಕುಂಜು ಇಬ್ಬರೂ ಹೌದೆಂದು ಅನುಮೋದಿಸಿದ್ದರು.

ಸುಮಾರು ಸಂತ್ರಸ್ತ ಶಿಬಿರಗಳಿಗೆ ಭೇಟಿ ಕೊಟ್ಟು ಸಾಂತ್ವನ ಹೇಳುತ್ತಾ ಅಲಪ್ಪುಜಾ ತಲುಪಿದಾಗ ಮಧ್ಯಾಹ್ನ ಎರಡೂವರೆ ಗಂಟೆಯಾಗಿತ್ತು. ಅಲ್ಲಿನ ಸಂತ್ರಸ್ತ ಶಿಬಿರದಲ್ಲಿ ಸುಮಾರು ಐನೂರಕ್ಕೂ ಹೆಚ್ಚು ಜನರಿದ್ದರು. ಲೋಕೋಪಯೋಗಿ ಇಲಾಖೆಯ ಮಂತ್ರಿ ಸತೀಶನ್ ಹರಿಹರನ್ ಅಣ್ಣ ಒಂದಷ್ಟು ಬೆಂಬಲಿಗರೊಂದಿಗೆ ಅಲ್ಲಿದ್ದು ಕೆ.ಎಮ್. ನಯ್ಯಾರರನ್ನು ಸ್ವಾಗತಿಸಿದ್ದರು. ಅಲ್ಲಿಯ ಜನರದ್ದೂ ಅದೇ ಗೋಳು. ಕೆ.ಎಮ್. ನಯ್ಯಾರ್ ಆ ಜನರನ್ನೂ ಕುರಿತು ಸಾಂತ್ವನದ ಮಾತುಗಳನ್ನು ಆಡಿ ಇಷ್ಟು ತ್ವರಿತವಾಗಿ ಪರಿಹಾರ ಕಾರ್ಯಗಳನ್ನು ಕೈಗೊಳ್ಳಲು ಪ್ರಮುಖವಾಗಿ ಲೋಕೋಪಯೋಗಿ ಮಂತ್ರಿ ಸತೀಶನ್ ಹರಿಹರನ್ ಕಾರಣರೆಂದು ಒತ್ತಿ ಹೇಳಿದ್ದರು. ಅಲ್ಲಿಯ ಜನರ ಅಗತ್ಯಗಳನ್ನು ಅತ್ಯಂತ ತ್ವರಿತವಾಗಿ ಪೂರೈಸುವಂತೆ ಜಿಲ್ಲಾಡಳಿತಕ್ಕೆ ಒತ್ತಾಯ ಮಾಡಿದ್ದರು. ಸತೀಶನ್ ಹರಿಹರನ್ ಅಣ್ಣನ ಬಳಿಯಿದ್ದ ಬ್ಯಾಗಿನಿಂದ ತೆಗೆದ ನೋಟುಗಳನ್ನು ಸಾಲಾಗಿ ನಿಂತ ಜನರ ಕೈಗಳಲ್ಲಿಡುತ್ತಾ ನಮಸ್ಕರಿಸಿ ದ್ದರು. ಜನ ತಾವೂ ಪ್ರತಿಯಾಗಿ ನಮಸ್ಕರಿಸುತ್ತಾ ಕೆ.ಎಮ್. ನಯ್ಯಾರರಿಗೂ ಮತ್ತು ಸತೀಶನ್ ಹರಿಹರನ್‌ಗೂ ಜಯಘೋಷಗಳನ್ನು ಕೂಗಿದ್ದರು. ಶಿಬಿರದಲ್ಲಿಯೇ ಊಟ ಮುಗಿಸಿ ಪ್ರಯಾಣ ಮುಂದುವರಿಸಲಾಯಿತು. ಅದೊಂದು ಮಾನ ವೀಯ ಮತ್ತು ಭಾವಪೂರ್ಣವಾದ ಸನ್ನಿವೇಶ ವಾಗಿತ್ತು. ಅಲ್ಲಿಂದ ಪ್ರಯಾಣ ಚಂಗನ್ನೇರಿಯ ಕಡೆಗೆ ತುಂಬಾ ನಿಧಾನವಾಗಿ ಸಾಗಿತ್ತು. ಪ್ರವಾಹ ಚೆಂಗನ್ನೇರಿಯ ರೈಲು ನಿಲ್ದಾಣವನ್ನು ಅಪ್ಪಳಿಸಿತ್ತಂತೆ. ಚೆಂಗನ್ನೇರಿಯಲ್ಲಿ ಸುಮಾರು ಮನೆಗಳು ಕುಸಿದಿದ್ದವಲ್ಲದೆ, ಅನೇಕ ಮನೆಗಳು ಮುಳುಗಿದ ಸ್ಥಿತಿಯಲ್ಲಿಯೇ ಇದ್ದವು.

ಚಂಗನ್ನೇರಿಯಲ್ಲೇ ಅಂದು ರಾತ್ರಿ ಉಳಿಯುವುದು ನಿಶ್ಚಯವಾಗಿತ್ತು. ಚೆಂಗನ್ನೇರಿಯ ದೊಡ್ಡ ಜ್ಯುವೆಲರಿ ಮರ್ಚೆಂಟ್ ಕರುಣಾಕರನ್ ಮೊದಲಿಯಾರ್ ಮನೆಯಲ್ಲಿ ಉಳಿಯುವುದೆಂದು ನಿರ್ಧರಿಸಿ ಕಾರು ಆ ಕಡೆ ಹೊರಟಿತ್ತು. ವಿಶಾಲ ವಾದ ಗುಡ್ಡದಂತಿದ್ದ ಅಡಿಕೆ ತೋಟದ ಭವ್ಯವಾದ ಮನೆಯ ಮುಂದೆ ಕಾರು ನಿಂತಿತ್ತು. ಮನೆಯ ಇಕ್ಕೆಡೆಗಳಲ್ಲಿ ನಳನಳಿಸುತ್ತಿದ್ದ ಶುಂಠಿಯ ಗಿಡ ಗಳು. ಘಮ್ಮನೆಯ ಶುಂಠಿಯ ವಾಸನೆ ಇಡೀ ಪರಿಸರವನ್ನು ವ್ಯಾಪಿಸಿತ್ತು. ಶರಟು ಪಂಚೆ ತೊಟ್ಟಿದ್ದ ಸರಳವಾಗಿದ್ದ ವ್ಯಕ್ತಿಯೊಬ್ಬರು ಗೇಟಿನಲ್ಲೆ ನಿಂತು ಸ್ವಾಗತಿಸಿದ್ದರು. ಅವರೇ ಕರುಣಾಕರನ್ ಮೊದಲಿಯಾರ್. ಅವರ ತಾತ ತಮಿಳುನಾಡಿನ ತೂತುಕುಡಿಯಿಂದ ಬಂದು ಚಿಲ್ಲರೆ ಶುಂಠಿ